ಕಂಡಿಷನ್‌ಗಳನ್ನು ಹಾಕಿದ್ದಾರೆ. ಆ ನಾಲ್ಕು ಕಂಡಿಷನ್ ಒಳಗೆ ಬರುವುದಿದ್ದರೆ ಅವರನ್ನು ಮಾತ್ರ ನಾವು ರೆಗ್ಯುಲರೈಸೇಷನ್ ಮಾಡಬಹುದು ಎಂದು ಸೂಚನೆ ಇದೆ. (ಉಮಾ ದೇವಿ ಅವರ ಪ್ರಕರಣ) ಈ ಹಿನ್ನಲೆಯಲ್ಲಿ ಸುಮಾರು 17,000 ಜನ ದಿನಗೂಲಿ ನೌಕರರು ಏನಿದ್ದಾರೆ ಅವರಿಗೆ ನ್ಯಾಯ ಒದಗಿಸಿ ಕೊಡಬೇಕು. ಅವರಿಗೆ ಹೇಗಾದರೂ ಮಾಡಿ ಅವರ ಹುದ್ದೆಗಳನ್ನು ರೆಗ್ಯುಲರೈಸ್ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ ಹಿಂದೆ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಎಂ. ಉದಾಸಿಯವರ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿ ರಚಿಸಿತ್ತು. ಆ ಸಚಿವ ಸಂಪುಟದ ಉಪ ಸಮಿತಿ ಇದಕ್ಕೆ ಅನುಕೂಲ ಆಗುವ ರೀತಿಯಲ್ಲಿ ಒಂದು ವರದಿಯನ್ನು ಕೊಟ್ಟು ಶಿಫಾರಸ್ಸು ಮಾಡಿದ್ದೇವೆ. ಆ ಶಿಫಾರಸ್ಸಿನ ಬಗ್ಗೆ ಸರ್ಕಾರ ಹಣಕಾಸು ಇಲಾಖೆ ಜೊತೆ ಚರ್ಚೆ ಮಾಡುತ್ತಿದೆ. 17,000 ಜನ ದಿನಗೂಲಿ ನೌಕರರು ಏನಿದ್ದಾರೆ. ಅವರಿಗೆ ಈ ನಾಲ್ಕು ಕಂಡಿಷನ್ ಒಳಗಡೆ ಯಾವ ರೀತಿ ಅವರನ್ನು ರೆಗ್ಯುಲರೈಸ್ ಮಾಡಬಹುದು. ಯಾವ ರೀತಿ ಅವರಿಗೆ ನ್ಯಾಯ ದೊರಕಿಸಿ ಕೊಡಬಹುದು ಎಂದು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ.

8. ವಿಷಯ : ಹಿಪ್ಪರಗಿ ಬ್ಯಾರೇಜ್‌ನ ಎತ್ತರವನ್ನು ಹೆಚ್ಚಿಸುವ ಕುರಿತು.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ಬೇಸಿಗೆಯಲ್ಲಿ ಬರಿದಾಗಿ ಹಿಪ್ಪರಗಿಯಿಂದ ಗಲಗಲಿಯವರೆಗೆ ಕುಡಿಯುವ ನೀರು ಸಿಗುವುದಿಲ್ಲ. ರೈತರು ಅಲ್ಲಿ ಬೆಳೆದ ಬೆಳೆಗಳೂ ಕೂಡ ಹಾನಿಯಾಗುವ ಸಂಭವವಿರುವುದರಿಂದ ಪ್ರತಿ ವರ್ಷ ಈ ರೀತಿ ಪರಿಸ್ಥಿತಿ ಬಂದಾಗ ಅದನ್ನು ಎದುರಿಸುವುದಕ್ಕೆ ಸರ್ಕಾರಕ್ಕೆ ಕೂಡ ಸಾಧ್ಯವಾಗದೆ ಇರುವ ಪರಿಸ್ಥಿತಿ ಬರುತ್ತದೆ. ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಪ್ರಯತ್ನ ಆದಾಗ ಒಂದೊಂದು TMCಗೆ ನಾವು 3 ಕೋಟಿ ರೂಪಾಯಿಗಳನ್ನು ಕಟ್ಟುವ ಸಂದರ್ಭ ಬರುತ್ತದೆ. ಆದ್ದರಿಂದ ಈ ಸಮಸ್ಯೆಗೆ ಒಂದು ಶಾಶ್ವತವಾದ ಪರಿಹಾರ ಬೇಕು ಎನ್ನುವ ಹಿನ್ನಲೆಯಲ್ಲಿ ನಿನ್ನೆ ಬರೆದ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ಕೂಡ ನಾನು ಪ್ರಸ್ತಾಪ ಮಾಡಿದೆ. ಬೀಳಗಿ

ತಾಲ್ಲೂಕು ಗಲಗಲಿಯಲ್ಲಿರುವಂತಹ ಬ್ಯಾರೇಜ್‌ಗೆ ಸುಮಾರು ಎರಡು ಮೀಟರ್ ಎತ್ತರ ಮಾಡಿದರೆ ಸುಮಾರು ಒಂದು ಟಿ.ಎಮ್..ಸಿ. ಅಷ್ಟು ಹೆಚ್ಚಿನ ನೀರನ್ನು ನಾವು ಸಂಗ್ರಹ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದರ ಜೊತೆಗೆ ಸುಮಾರು ಐದಾರು ಗ್ರಾಮಗಳು ಮಲ್ಟಿ ವಿಲೇಜ್ ಕುಡಿಯುವ ನೀರಿನ ಮೇಲೆ ಆವಲಂಬನೆ ಆಗಿರುವಂತಹ ಸಂದರ್ಭ ಇದೆ. ಇದು ಅಥಣಿ, ಜಮಖಂಡಿ ಮತ್ತು ಬಬಲೇಶ್ವರ, ನಾಲ್ಕು ವಿಧಾಸನಭಾ ಕ್ಷೇತ್ರಗಳಿಗೆ ಒಂದು ಶಾಶ್ವತ ಪರಿಹಾರ ಕೊಟ್ಟ ಹಾಗಾಗುತ್ತದೆ. ಸರ್ಕಾರ ತಕ್ಷಣ ಇದನ್ನು ಮಂಜೂರು ಮಾಡಿ ಜಾರಿಗೆ ತರುವ ಕೆಲಸ ಆಗಬೇಕು.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಬೃಹತ್ ನೀರಾವರಿ ಇಲಾಖೆಗೆ ಬರತಕ್ಕಂತಹ ವಿಷಯ. ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ. ಗಲಗಲಿ ಬ್ಯಾರೇಜ್ ಅನ್ನು ಎರಡು ಮೀಟರ್ ಎತ್ತರ ಮಾಡುಬಹುದಾ ಎಂಬ ಬಗ್ಗೆ ತಾಂತ್ರಿಕ ಸಲಹೆಯನ್ನು ಪಡೆದು ಎತ್ತರ ಮಾಡುವುದಕ್ಕೆ ಸಾಧ್ಯತೆ ಇದ್ದರೆ ಖಂಡಿತವಾಗಿಯೂ ಸರ್ಕಾರ ಮಾಡುವುದಕ್ಕೆ ಸಿದ್ಧ ಇದೆ. ಅದಲ್ಲದೆ ಎರಡು ಮೀಟರ್ ಎತ್ತರ ಮಾಡುವುದರಿಂದ ಹಿನ್ನೀರಿನಲ್ಲಿ ಮುಳುಗಡೆ ಆಗತಕ್ಕಂತಹ ಭೂಮಿ, ಕಟ್ಟಡ ಮತ್ತು ಸಾರ್ವಜನಿಕ ಆಸ್ತಿಪಾಸ್ತಿ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಸರ್ವೆ ಮಾಡಿಸಿ ಅದು ಫೀಸಿಬಲ್ ಇದ್ದರೆ ಖಂಡತವಾಗಿ ಮಾಡಿಕೊಡುವುದಕ್ಕೆ ಸರ್ಕಾರ ಸಿದ್ದವಿದೆ.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಮಂತ್ರಿಗಳು ಒಂದು ವಿಷಯ ಪ್ರಸ್ತಾಪ ಮಾಡಿದರು, 519.6 ಹಿನ್ನೀರು ಬರುವಂತಹ ಸಂದರ್ಭದಲ್ಲಿ ಸರ್ಕಾರ ಈಗಾಗಲೇ ಪರಿಹಾರ ಕೊಟ್ಟಿದೆ. ಯಾವುದೇ ಒಂದು ರೂಪಾಯಿ ಭಾರ ಸರ್ಕಾರದ ಮೇಲೆ ಆಗುವುದಿಲ್ಲ ಹೀಗಾಗಿ ಈ ಯೋಜನೆ ಜಾರಿಗೆ ತರುವುದರಿಂದ ಸಾಕಷ್ಟು ನೀರು ಕೊಡಲಿಕ್ಕೆ ಆಗುತ್ತದೆ ಮತ್ತು ಇದಕ್ಕೊಂದು estimate ಕೂಡ ತಯಾರಾಗಿದೆ 4 ಕೋಟಿ 25 ಲಕ್ಷ ರೂಪಾಯಿ ಖರ್ಚು ಮಾಡಿದರೆ ನೀವು ಇಷ್ಟೊಂದು ನೀರು ಸಂಗ್ರಹ ಮಾಡಲಿಕ್ಕೆ ಆಗುತ್ತದೆ. ದಯವಿಟ್ಟು ನೀವು ಇದೇ ವರ್ಷ ಪ್ರಾರಂಭ ಮಾಡಬೇಕು.